**ದಿನಾಂಕಃ 09.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ- ವಾದಿ ಪರ ವಕೀಲರಿಂದಃ**

06. ನನಗೆ ಸದರಿ ಜಮೀನಿನ ಸಂಬಂಧ ಸುಮಾರು 20ವರ್ಷಗಳಿಂದ ಮಾಹಿತಿ ಇರುತ್ತದೆ. ನಾನು ಸರ್ಕಾರಿ ನೌಕರನಾಗಿದ್ದು, 1973ರಲ್ಲಿ ಸೇರಿಕೊಂಡಿದ್ದೆನು. ನಾನು ನನ್ನ ಸ್ವತ್ತನ್ನು 2010ರಲ್ಲಿ ಖರೀದಿ ಮಾಡಿರುತ್ತೇನೆ. ನಾನು ಸ್ವತ್ತನ್ನು ಖರೀದಿಸಲು ಅನುಮತಿಯನ್ನು ಪಡೆದುಕೊಂಡಿರುತ್ತೇನೆ. ಅನುಮತಿಯ ಸಂಬಂಧ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಅನುಮತಿಯೇ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಈ ಸಂಬಂಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಕ್ರಮವಾಗಿ ಜಮೀನನ್ನು ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ಸ್ವತ್ತನ್ನು ಖರೀದಿಸಿರುತ್ತೇನೆ ಎಂದರೆ ಸಾಕ್ಷಿಯು ಆದೇಶದ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1ನೇ ವಾದಿ ಮತ್ತು 1ನೇ ಪ್ರತಿವಾದಿಗಳು ತಮ್ಮ ಹೆಸರಿಗೆ ತಲಾ ಒಂದು ಎಕರೆಯನ್ನು ಖಾತೆ ಮಾಡಿಕೊಂಡ ನಂತರವೇ ನಾನು 1ನೇ ಪ್ರತಿವಾದಿಯ ಕಡೆಯಿಂದ ಸ್ವತ್ತನ್ನು ಖರೀದಿ ಮಾಡಿರುತ್ತೇನೆ ಅವರುಗಳು ಒಟ್ಟಿಗೆ ಇದ್ದು ವಿಭಾಗ ಕೋರಿ ದಾವೆ ಹಾಕಿಕೊಂಡಿದ್ದರು ಎಂದರೆ ಸರಿಯಲ್ಲ.

07. ವಾದಿಯ 1ಎಕರೆ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ನನ್ನ ಪಿತ್ರಾರ್ಜಿತವಾದ ಸ್ವತ್ತು, ಪಶ್ಚಿಮಕ್ಕೆ 1ನೇ ಪ್ರತಿವಾದಿಯ ಅನುಭವದಲ್ಲಿರುವ ಆಸ್ತಿ, ಉತ್ತರಕ್ಕೆ ಕರಿಯಪ್ಪ ನಂತರ ಸಿಬಿ ನಾಗರಾಜು ಮತ್ತು ದಕ್ಷಿಣಕ್ಕೆ ಅಂದಾನಯ್ಯ (ಚಿಕ್ಕಪ್ಪ) ಈಗ ಅವರ ಮಗ ಬಸಪ್ಪ ರವರ ಸ್ವತ್ತು ಇರುತ್ತದೆ. ಸದರಿ ಸ್ವತ್ತಿನ ಪೂರ್ವಕ್ಕೆ ಇರುವ ಜಾಗ ನನ್ನ ಸ್ವತ್ತಿಗೆ ಬಂದಿರುವ ಜಾಗ ಎಂದರೆ ಸರಿ. ಸಿ.ಬಿ ನಾಗರಾಜು ರವರು ಕರಿಯಪ್ಪ ರವರಿಂದ ಕ್ರಯಕ್ಕೆ ಪಡೆದುಕೊಂಡಿದ್ದು, ಈಗ ನನ್ನ ತಮ್ಮ ತೀರಿಕೊಂಡ ಮೇಲೆ ಅವರ ಹೆಂಡತಿಯಾದ ಯಾಶೋದಮ್ಮ ರವರ ಸ್ವಾಧೀನದಲ್ಲಿ ಇರುತ್ತದೆ.

08. 1ನೇ ಪ್ರತಿವಾದಿಗೆ ಬಂದ ಒಂದು ಎಕರೆ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ರಾಜಶೇಖರಯ್ಯ (1ನೇ ವಾದಿ), ಪಶ್ಚಿಮಕ್ಕೆ ಮತ್ತು ಉತ್ತರಕ್ಕೆ ಸಿ.ಬಿ ನಾಗರಾಜು ಈಗ ಅವರ ಹೆಂಡತಿ ಯಶೋದಮ್ಮ, ದಕ್ಷಿಣಕ್ಕೆ ಅಂದಾನಯ್ಯ ನಂತರ ಬಸಪ್ಪ ಇರುತ್ತಾರೆ. ಸದರಿ ಸ್ವತ್ತುಗಳ ಅಕ್ಕಪಕ್ಕ ಎಲ್ಲವು ಕೂಡಾ 1ನೇ ವಾದಿಯ ಪಿತ್ರಾರ್ಜಿತ ಸ್ವತ್ತುಗಳು ಇದ್ದು, ಅವುಗಳನ್ನು ನಾವುಗಳು ಖರೀದಿ ಮಾಡಿರುತ್ತೇವೆ ಎಂದರೆ ನನಗೆ ಗೊತ್ತಿರುವುದಿಲ್ಲ. ಅದು ನನ್ನ ತಮ್ಮನಿಗೆ ಗೊತ್ತಿರಬಹುದು ಎಂದು ಸಾಕ್ಷಿ ನುಡಿಯುತ್ತಾರೆ. ಆತನ ಹೆಂಡತಿ ಸ್ವಾಧೀನದಲ್ಲಿದ್ದಾರೆ. ಈ ಹಿಂದೆ ಕೋಡಿಹಳ್ಳಿ ಕಡೆಯಿಂದ ಬರಬೇಕಾದರೆ ನನ್ನ ಸ್ವತ್ತಿನ ಮೇಲೆಯೇ ದಾರಿ ಹೋಗುತ್ತಿತ್ತು ಎಂದರೆ ಸಾಕ್ಷಿಯು ಅಲ್ಲಿ ಯಾವುದೇ ಕಾಲುದಾರಿ ಬರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಆ ಕಾಲುದಾರಿಯಲ್ಲಿಯೇ ವ್ಯವಸಾಯಕ್ಕೆ ಸಂಬಂಧಿಸಿದ ಟ್ರಾಕ್ಟರ್ ಮತ್ತು ಇತರೆ ವಸ್ತುಗಳನ್ನು ತೆಗೆದುಕೊಂಡು ಹೋಗುತ್ತಾರೆ ಎಂದರೆ ಆ ರೀತಿ ಯಾವುದೇ ಟ್ರಾಕ್ಟರ್ ಹೋಗುವುದಿಲ್ಲ, ಕಾಲುನಡಿಗೆಯಲ್ಲಿ ಸಾಗುತ್ತಾರೆ ಎಂದು ನುಡಿಯುತ್ತಾರೆ.

09. 1ನೇ ವಾದಿ ಹಾಗೂ 1ನೇ ಪ್ರತಿವಾದಿ ನಾನು ಈಗ ಖರೀದಿಸಿರುವ ಸ್ವತ್ತಿನ ಮೇಲೆಯೇ ತಮ್ಮ ಸ್ವತ್ತುಗಳಿಗೆ ಓಡಾಡುತ್ತಿದ್ದರು ಎಂದರೆ ಸರಿಯಲ್ಲ. ಮೊದಲಿಗೆ ನನ್ನ ಸ್ವತ್ತು ಬಂದು ನಂತರ 1ನೇ ವಾದಿಯ ಸ್ವತ್ತು ಬರುತ್ತದೆ ಎಂದರೆ ಸರಿ. 1ನೇ ವಾದಿಯು ಈ ಮುಂಚೆ 1ನೇ ಪ್ರತಿವಾದಿಯ ಜಾಗದಿಂದಲ್ಲೆ ಸಾಗುತ್ತ ವ್ಯವಸಾಯ ಮಾಡುತ್ತಿದ್ದರು, ನಂತರ ನಾನು ಖರೀದಿದ ಮೇಲೆ ಅವರಿಗೆ ನಾನು ಅವರಿಗೆ ದಾರಿ ಬಿಡುತ್ತಿಲ್ಲ, 1ನೇ ವಾದಿಗೆ ಬೇರೊಂದು ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರಿಗೆ ಬೇರೊಂದು ದಾರಿ ಇರುತ್ತದೆ ಎಂದು ನುಡಿಯುತ್ತಾರೆ. ನಾನು 1ನೇ ವಾದಿಗೆ ಓಡಾಡಲು ಬೇರೋಂದು ದಾರಿ ಕೊಟ್ಟಿರುತ್ತೇನೆ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**